ಸಾಕ್ಷಿಯನ್ನು ದಿಃ 03-12-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಬಿ ಎಸ್ ವಕೀಲರಿಂದ (ಎದುರುದಾರ ನಂ.2 ರ ಪರವಾಗಿ)**

ಅಪಘಾತಕ್ಕೊಳಗಾಗದ ಅಶೋಕ ಲೈಲ್ಯಾಂಡ್ ದೋಸ್ತ ಸಂಖ್ಯೆ ಕೆ ಎ 26 /ಎ 6230 ಪ್ರಯಾಣಿಕರ ವಾಹನವಾಗಿರಲಿಲ್ಲ ಎಂದರೆ ಸರಿ. ಸದರಿ ವಾಹನ ಸರಕು ಸಾಗಾಟದ ವಾಹನವಾಗಿತ್ತು ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ವಾಹನದಲ್ಲಿ ಶೇಂಗಾ ಚೀಲಗಳು ತುಂಬಿದ್ದವು ಎಂದರೆ ಸರಿ. ನನ್ನ ಕೆಲಸದ ಅವಧಿ ಬೆಳಿಗ್ಗೆ 09-.30 ರಿಂದ ಸಾಯಂಕಾಲ 04-30 ರವರೆಗೆ ಇರುತ್ತದೆ. ನಾನು ಸರ್ಕಾರ ಶಾಲಾ ಶಿಕ್ಷಕಿಯಾಗಿದ್ದೇನೆ. ನನ್ನ ವಯಸ್ಸು ಮತ್ತು ಸಂಬಳದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ಆ ದಿನ ಸದರಿ ವಾಹನದಲ್ಲಿ ಚಾಲಕ ಮತ್ತು ಕ್ಲೀನರ್ ಹೊರತುಪಡಿಸಿ 5-6 ಜನ ಪ್ರಯಾಣಿಕರಿದ್ದೆವು. ಅಪಘಾತ ಸ್ಥಳದಲ್ಲಿ ರಸ್ತೆ ನೇರವಾಗಿದೆ ಎಂದರೆ ಸರಿ. ಅಲ್ಲಿ ರಸ್ತೆ ಕಿರಿದಾಗಿದೆ ಮತ್ತು ರಸ್ತೆ ವಿಭಜಕ ಇದೆ ಎಂದರೆ ಸರಿ. ಇನ್ನೊಂದು ವಾಹನ ಲಾರಿ ಆಗಿತ್ತು ಎಂದರೆ ಸರಿ. ಸದರಿ ಲಾರಿ ಸಂಖ್ಯೆಃ ಆರ್ ಜೆ 06/ಜಿಎ 1882 ವಾಹನ ಹೊರಟಿತ್ತು, ಆದರೆ ಯಾವುದೇ ಸೂಚನೆ ನೀಡದೇ ಒಮ್ಮಿದೊಮ್ಮಲೆ ಲಾರಿ ನಿಂತಿತು ಎಂದರೆ ಸರಿ. ಸದರಿ ಲಾರಿ ಒಮ್ಮಿದೊಮ್ಮೆಲೆ ನಿಂತ ಕಾರಣ ನಾವು ಪ್ರಯಾಣಿಸುತ್ತಿದ್ದ ವಾಹನ ಲಾರಿಗೆ ಡಿಕ್ಕಿಯಾಯಿತು ಎಂದರೆ ಸರಿ. ಅಪಘಾತದಲ್ಲಿ ಎಡ ಪಾದದ ಮೂಳೆ ಹಾಗೂ ಎಡ ಮುಂಗೈ ಮೂಳೆ ಮುರಿದಿದೆ. ಅಪಘಾತದ ನಂತರ ನನ್ನನ್ನು ಮುಂಡರಗಿ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಪಘಾತದ ಬಗ್ಗೆ ನಾನು ವೈದ್ಯರಿಗೆ ಮಾಹಿತಿ ನೀಡಿದ್ದೇನೆ. ಮಂಡರಗಿ ವೈದ್ಯರು ಕೂಡಲೇ ನನ್ನನ್ನು ಗದಗ ಜಿಲ್ಲಾಸ್ಪತ್ರೆಗೆ ಕಳುಹಿಸಿದರು. ಗದಗ ಜಿಲ್ಲಾಸ್ಪತ್ರೆಯಲ್ಲಿ ನಾನು 8-10 ದಿನ ಒಳರೋಗಿಯಾಗಿದ್ದೆ. ಘಟನೆಯ ಬಗ್ಗೆ ನಾನು ದೂರು ಸಲ್ಲಿಸಿಲ್ಲ. ಪೊಲೀಸರು ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಹೇಳಿಕೆ ಪಡೆದಿದ್ದಾರೆ. ಗದಗ ಜಿಲ್ಲಾಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ನಂತರ ನಾನು ಎಸ್ ಡಿ ಎಮ್ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ವೈದ್ಯರಿಗೆ ಅಪಘಾತದ ಬಗ್ಗೆ ಮಾಹಿತಿ ನೀಡಿದ್ದೇನೆ. ನಾನು ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ಸುಮಾರು 15 ದಿನ

ಒಳರೋಗಿಯಾಗಿದ್ದೆ. ಅಲ್ಲಿಯೂ ಸಹ ನಾನು ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದೇನೆ. ಮುಂಡರಗಿ ಮತ್ತು ಗದಗ ಜಿಲ್ಲಾಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಇದೆ ಎಂದರೆ ಸರಿ. ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ಔಷಧಿ ತರಲು ಚೀಟಿ ಕೊಡುತ್ತಿದ್ದರು ಎಂದರೆ ಸರಿ. ಅಪಘಾತ ಸಮಯದಲ್ಲಿ ಎಸ್ ಡಿ ಎಮ್ ಆಸ್ಪತ್ರೆಯವರು ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳಿ ನನ್ನನ್ನು ಡಿಸ್ಚಾರ್ಜ ಮಾಡಿದರು. ಅಲ್ಲಿಂದ ಡಿಸ್ಚಾರ್ಜ ಆದ ನಂತರ ನಾನು ಬೇರೆ ಯಾವುದೇ ಆಸ್ಪತ್ರೆ ಮತ್ತು ವೈದ್ಯರ ಬಳಿ ತೋರಿಸಿಲ್ಲ. ನಾನು ಚಿಕಿತ್ಸಾ ವೆಚ್ಚವನ್ನು ನಾನು ನೌಕರಿ ಮಾಡುವ ಇಲಾಖೆಯಿಂದ ಪಡೆದಿಲ್ಲ. ಅವರು ಮೆಡಿಕಲ್ ಬಿಲ್ ಸಲ್ಲಿಸಲು ಹೇಳಿದ್ದರು ಆದರೆ ನಾನು ಬಿಲ್ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ಈಗಲೂ ಸಹ ನಮ್ಮ ಇಲಾಖೆಗೆ ಮೆಡಿಕಲ್ ಬಿಲ್ಲ ಸಲ್ಲಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ಈಗಲೂ ಸಹ ಅದೇ ಹುದ್ದೆಯಲ್ಲಿ ಮುಂದುವರೆದಿದ್ದೇನೆ ಎಂದರೆ ಸರಿ. ಅಪಘಾತದ ನಂತರ ನನಗೆ ಇಕ್ರಿಮೆಂಟ್ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಆದರೆ ಪ್ರೊಮೋಷನ್ ಆಗಿಲ್ಲ ಎಂದು ಹೇಳುತ್ತಾರೆ. ನಾನು ನಿಯಮಾನುಸಾರ ಇಕ್ರಿಮೆಂಟ್ ಪಡೆದಿದ್ದರೂ ಸಹ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸ್ಯಾಲರಿ ಸ್ಲೀಪ್ ದಲ್ಲಿ ಇಕ್ರಮೆಂಟ್ ಹಾಗೂ ಇತರ ಸೌಲಭ್ಯದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಿಪಿಃ13 ಜೂನ್ 2021 ಕ್ಕೆ ಸಂಬಂಧಿಸಿದೆ ಎಂದರೆ ಸರಿ. ಅದು ಅಪಘಾತಕ್ಕಿಂತ ಮೊದಲಿನ ಸಂಬಳ ಚೀಟಿ ಇದೆ ಎಂದರೆ ಸರಿ. ಸಧ್ಯದ ಸಂಬಳ ಚೀಟಿ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಧ್ಯದ ಸಂಬಳದ ಬಗ್ಗೆ ಪೇ ಸ್ಲೀಪ್ ಹಾಜರಪಡಿಸುತ್ತೇನೆ ಎಂದು ಹೇಳುತ್ತಾರೆ. ಅಪಘಾತದ ನಂತರ ನಾನು ರಜೆ ಪಡೆಯಲು ಅರ್ಜಿ ಸಲ್ಲಿಸಿದ್ದೆ. ಆ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನಾನು ಅಪಘಾತದ ನಂತರ ನೌಕರಿಗೆ ಗೈರು ಹಾಜರಿದ್ದ ಬಗ್ಗೆ attendance register ಹಾಜರಪಡಿಸಿಲ್ಲ. ಅದನ್ನು ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ಕುಟುಂಬದಲ್ಲಿ ಎಲ್ಲರು ನನ್ನ ಮೇಲೆ ಅವಲಂಬಿತರಾಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.5 ಲಕ್ಷ ವೈದ್ಯಕೀಯ ವೆಚ್ಚ ಭರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಮೆಡಿಕಲ್ ಬಿಲ್ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ನನಗೆ ಯಾವುದೇ ತೀವ್ರ ಸ್ವರೂಪದ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನತೆ ಆಗಿಲ್ಲ ಮತ್ತು ಆದಾಯಕ್ಕೆ ಯಾವುದೇ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ. ನಾನು ಪ್ರಯಾಣಿಸುತ್ತಿದ್ದ ವಾಹನದ ಚಾಲಕನಿಗೆ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಕಾರಣ ನನಗೆ ಪರಿಹಾರ ನೀಡಲು 2 ನೇ ಎದುರುದಾರ ಸಂಸ್ಥೆ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀಮತಿ ಕೆ ಎಮ್ ಎಮ್ ವಕೀಲರಿಂದ (4 ನೇ ಎದುರುದಾರರ ಪರ)**

ಅಪಘಾತದ ದಿನ ನಾನು ಹಾಗೂ ಇನ್ನಿಬ್ಬರು ಪ್ರಯಾಣಿಕರಾದ ಶರಣಯ್ಯ, ಶಿವಪುತ್ರವ್ವ ಹಾಗೂ ಕಮಲಾಕ್ಷವ್ವ ಗೂಡ್ಸ ವಾಹನ ಸಂಖ್ಯೆ ಕೆ ಎ 26/ಎ 6230 ದ ಕ್ಯಾಬಿನದಲ್ಲಿ ಕುಳಿತಿದ್ದೆವು. ಸದರಿ ವಾಹನ ಚಾಲಕ ವಾಹನವನ್ನು ಅತೀ ವೇಗವಾಗಿ ಚಲಾಯಿಸುತ್ತಿದ್ದ ಎಂದರೆ ಸರಿ. ನಾನು ಆ ವಾಹನದ ಕ್ಯಾಬಿನದಲ್ಲಿದ್ದುದ್ದರಿಂದ ಮುಂದೆ ರಸ್ತೆಯಲ್ಲಿರುವ ವಾಹನಗಳು ಕಾಣಿಸುತ್ತಿದ್ದವು ಎಂದರೆ ಸರಿ. ಅಪಘಾತ ಹಮ್ಮಿಗೆ ಮುಂಡರಗಿ ರಸ್ತೆಯಲ್ಲಿ ಆಗಿದೆ. ಸದರಿ ವಾಹನದಲ್ಲಿ ಭಾರಿ ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಅದು ದೊಡ್ಡ ರಸ್ತೆಯಾಗಿತ್ತು ಎಂದರೆ ಸರಿ. ಲಾರಿ ಸಂಖ್ಯೆ ಆರ್ ಜೆ 06 ಜಿ ಎ 1882 ವಾಹನ ರಸ್ತೆಯ ಎಡಭಾಗದಲ್ಲಿ ನಿಂತಿತ್ತು ಎಂದರೆ ಸರಿ. ಆ ಸಮಯದಲ್ಲಿ ನಮ್ಮ ವಾಹನದ ಮುಂದೆ ಬೇರೆ ಯಾವುದೇ ವಾಹನ ಹೊರಟಿರಲಿಲ್ಲ. ನಾವು ಪ್ರಯಾಣಿಸುತ್ತಿದ್ದ ವಾಹನ ಚಾಲಕನೇ ಅತೀ ಜೋರಿನಿಂದ ಮತ್ತು ನಿಷ್ಕಾಳಜಿತನಿಂದ ವಾಹನ ಚಲಾಯಿಸಿ ನಿಂತಿದ್ದ ಲಾರಿಗೆ ಡಿಕ್ಕಿ ಪಡಿಸಿದ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ವಾಹನ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿ. ಆತನ ವಿರುದ್ಧ ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ಅಪಘಾತದಲ್ಲಿ ನನಗೆ, ಶಿವಪುತ್ರಮ್ಮನಿಗೆ ಮತ್ತು ಕಮಲಾಕ್ಷಮ್ಮನಿಗೆ ಗಾಯಗಳಾಗಿವೆ. ನನಗೆ ಎಡಗಾಲು, ಹಾಗೂ ಎಡಗೈ ಮೂಳೆ ಮುರಿತ ಆಗಿದೆ. ರೂ.5 ಲಕ್ಷ ವೈದ್ಯಕೀಯ ವೆಚ್ಚ ಭರಿಸಿದ್ದೇನೆ ಎಂದು ಸುಳ್ಳು ಭರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತಕ್ಕಿಂತ ಮೊದಲು ಇದ್ದ

ಹುದ್ದೆಯಲ್ಲಿಯೇ ಅಪಘಾತದ ನಂತರವೂ ಮುಂದುವರೆದಿದ್ದೇನೆ ಎಂದರೆ ಸರಿ. ಲಾರಿ ಸಂಖ್ಯೆ ಕೆ ಎ 26/ಎ 6230 ವಾಹನ ಚಾಲಕನ ತಪ್ಪಿನಿಂದ ಅಪಘಾತ ಆಗಿರುವುದರಿಂದ ನನಗೆ ಪರಿಹಾರ ನೀಡಲು 4 ನೇ ಎದುರುದಾರ ಸಂಸ್ಥೆ ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಎದುರುದಾರ ನಂ.1 ಮತ್ತು 3 ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

C/C. ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.